# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:-** ಶ್ರೀ.ಎಂ.ಚಂದ್ರಶೇಖರ, ತಹಶೀಲ್ದಾರರು, ಸಂಡೂರು.

**ವಾದಿಗಳು:-** (1)ದಿ:ಶ್ರೀ.ಹಂಪಣ್ಣ ತಂದೆ.ಎಂ.ಹನುಮಂತಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು.
(2)ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು.
(ಜೆ.ಎಂ.ಎಸ್.ವಕೀಲರು ಸಂಡೂರು)

**ವಿರುದ್ಧ**

**ಪ್ರತಿವಾದಿಗಳು:-** (1)ಶ್ರೀ.ಕೆ.ಹನುಮೇಶರಾವ್ ಕೆ.ಲಕ್ಷ್ಮಣರಾವ್, 13ನೇವಾರ್ಡ, ಕೋಟೆ ಏರಿಯಾ, ಸಾ:ಕಮಲಾಪುರ, ಹೊಸಪೇಟೆ ತಾಲ್ಲೂಕು. (ಯೂಸೂಪ್ ವಕೀಲರು ಹೊಸಪೇಟೆ)
(2)ಶ್ರೀ.ಪುಲ್ಲಯ್ಯ ತಂದೆ.ರಂಗಪ್ಪ, ಸಾ:ಮರುಟ್ಲ ಗ್ರಾಮ, ಸಂಡೂರು ತಾಲ್ಲೂಕು.
(3)ಕಂದಾಯ ನಿರೀಕ್ಷಕರು ತೋರಣಗಲ್ಲು.

ಪೀಠಿಕೆ:-

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ತೋರಣಗಲ್ಲು | ಮರುಟ್ಲ | 47/ /<br>87/ / | 7.53<br>11.28 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಶ್ರೀ.ಕೇಶವಚಾರ್ ಇವರ ಹೆಸರಿನಲ್ಲಿರುವ ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಬಳ್ಳಾರಿ ಇವರ ಡಾಕುಮೆಂಟ್ರ ಪತ್ರಸಂಖ್ಯೆ. 1194/1969-70 ದಿನಾಂಕ:10-06-1969 ರ ಪ್ರಕಾರ ವಾದಿ-1 ದಿ:ಶ್ರೀ.ಹಂಪಣ್ಣ ತಂದೆ.ಎಂ.ಹನುಮಂತಪ್ಪ ಸಾ:ಅಂತಾಪುರ. ಸಂಡೂರು ತಾಲ್ಲೂಕು ಇವರು ಖರೀದಿಸಿದ್ದು ಇರುತ್ತದೆ. ಮತ್ತು ಲಚ್ಮನ ಮಗ ಹನುಮಂತರಾವ್ ಮೈ.ನಿ.ಸುಂದ್ರಮ್ಮ ಇವರ ಹೆಸರಿನಲ್ಲಿರುವ ಮರುಟ್ಲ ಗ್ರಾಮದ ಸ.ನಂ. 87/ /ವಿಸ್ತೀರ್ಣ 11.28 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಬಳ್ಳಾರಿ ಇವರ ಡಾಕುಮೆಂಟ್ರ ಪತ್ರಸಂಖ್ಯೆ. 3889/1964 ದಿನಾಂಕ:04-02-1964 ರಲ್ಲಿ ವಾದಿ-1 ದಿ:ಮದ್ಲೇಟರ ಹಂಪಣ್ಣ ಇವರು ಖರೀದಿಸಿದ್ದು ಇರುತ್ತದೆ. ಆದರಂತೆ ಚೆಕ್‌ಲಿಸ್ಟ್ ತೆಗೆಸಿದ್ದು, ಸದ್ರಿ ಜಮೀನನ್ನು ವಾದಿ-1 ಹಂಪಣ್ಣ ತಂದೆ.ಎಂ.ಹನುಮಂತಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರ ಮೊಮ್ಮಗ ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ತಮ್ಮ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕೋರಿದ್ದು, ವಹಿವಾಟಿನ ಸಂಖ್ಯೆ.21/2014-15 ದಿನಾಂಕ:08-06-2015 ಅನ್ನು ಗ್ರಾಮಲೆಕ್ಕಾಧಿಕಾರಿಗಳು ಮರುಟ್ಲ ಇವರು ಹಕ್ಕುಬದಲಾವಣೆ ಎಂ.ಆರ್.ಸಂಖ್ಯೆ H-11/2014-15 ದಿನಾಂಕ:08-06-2015 ರಲ್ಲಿ ದಾಖಲಿಸಿಕೊಂಡು ಸಂಬಂಧಿಸಿದವರಿಗೆ ನಮೂನೆ-21 ನೋಟೀಸು ಜಾರಿಗೊಳಿಸಲಾಗಿ ನಿಗದಿತ 30 ದಿನದೊಳಗಾಗಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮರುಟ್ಲ ಗ್ರಾಮದ ಸ.ನಂ.87 ರನ್ನು ತಂದೆಯಾದ ದಿ:ಶ್ರೀ.ಕೆ.ಲಕ್ಷ್ಮಣರಾವ್ ಇವರ ಹೆಸರಿಗೆ ಪಟ್ಟಾ ಇದ್ದು, ಸದ್ರಿ ಜಮೀನನ್ನು ನಮ್ಮ ಸ್ವಾಧೀನಾಭವದಲ್ಲಿರುವುದರಿಂದ ಸದ್ರಿ ಜಮೀನನ್ನು ಯಾರ ಹೆಸರಿಗೆ ಪಟ್ಟಾ ವರ್ಗಾವಣೆ ಮಾಡಬಾರದೆಂದು ಶ್ರೀ.ಕೆ.ಹನುಮೇಶರಾವ್ ತಂದೆ.ಕೆ.ಲಕ್ಷ್ಮಣರಾವ್, ಕಮಲಾಪುರ, ಹೊಸಪೇಟೆ ತಾಲ್ಲೂಕು ಇವರು ತಕರಾರು ಸಲ್ಲಿಸಿದ್ದು ಇರುತ್ತದೆ. ಮತ್ತು ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಜಮೀನನ್ನು ಯಾರ ಹೆಸರಿಗೆ ಪಟ್ಟಾ ವರ್ಗಾವಣೆ ಮಾಡಬಾರದೆಂದು ವಾದಿ-2 ಶ್ರೀ.ಪುಲ್ಲಯ್ಯ ತಂದೆ. ರಂಗಪ್ಪ, ಸಾ:ಮರುಟ್ಲ ಗ್ರಾಮ, ಸಂಡೂರು ತಾಲ್ಲೂಕು

(P.T.O)

ಇವರು ತಕರಾರು ಸಲ್ಲಿಸಿದ್ದು ಇರುತ್ತದೆ. ಪ್ರಯುಕ್ತ ಗ್ರಾಮಲೆಕ್ಕಿಗರು ಮರುಟ್ಲ ಇವರು ಮುಂದಿನ ಕ್ರಮಕ್ಕಾಗಿ ಈ ಕಾರ್ಯಾಲಯಕ್ಕೆ ದಿನಾಂಕ:12-08-2015 ರಂದು ಸಲ್ಲಿಸಿದ್ದು ಇರುತ್ತದೆ.

ಪ್ರಯುಕ್ತ ಸದ್ರಿ ಪ್ರಕರಣವನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129ರಡಿ ದಾಖಲಿಸಿಕೊಂಡು ಉಭಯರಿಗೆ ಹೇಳಿಕೊಳ್ಳುವ ಅವಕಾಶನೀಡಿ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ದಿನಾಂಕ:13-08-2015 ರಲ್ಲಿ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ:31-08-2015 ರಂದು ಪ್ರಾರಂಭಿಸಿ ದಿನಾಂಕ:30-05-2016 ರಂದು ಮುಕ್ತಾಯಗೊಳಿಸಲಾಯಿತು.

ದಿನಾಂಕ:30-05-2016 ರಂದು ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಹಾಗೂ ಇವರ ಪರ ವಕೀಲರು ಹಾಜರಾಗಿ ವಿವಾದಾಸ್ಪದ ಜಮೀನುಗಳ ಕುರಿತು ಶ್ರೀ.ಕೇಶವಚಾರ ಇವರ ಹೆಸರಿನಲ್ಲಿದ್ದ ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಬಳ್ಳಾರಿ ಇವರ ಡಾಕುಮೆಂಟ್ರ ಪತ್ರಸಂಖ್ಯೆ. 1194/1969-70 ದಿನಾಂಕ: 10-06-1969 ರ ಪ್ರಕಾರ ವಾದಿ-1 ದಿ:ಶ್ರೀ.ಹಂಪಣ್ಣ ತಂದೆ.ಎಂ.ಹನುಮಂತಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಖರೀದಿಸಿದ್ದು ಇರುತ್ತದೆ. ಮತ್ತು ಲಚ್ಮನ ಮಗ ಹನುಮಂತರಾವ್ ಮೈ.ನಿ.ಸುಂದ್ರಮ್ಮ ಇವರ ಹೆಸರಿನಲ್ಲಿರುವ ಮರುಟ್ಲ ಗ್ರಾಮದ ಸ.ನಂ. 87/ /ವಿಸ್ತೀರ್ಣ 11.28 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಬಳ್ಳಾರಿ ಇವರ ಡಾಕುಮೆಂಟ್ರ ಪತ್ರಸಂಖ್ಯೆ. 3889/1964 ದಿನಾಂಕ: 04-02-1964 ರಲ್ಲಿ ವಾದಿ-1 ದಿ:ಮದ್ಲೆಟ್ಟಿ ಹಂಪಣ್ಣ ತಂದೆ.ಎಂ.ಹನುಮಂತಪ್ಪ ಇವರು ಖರೀದಿಸಿದ್ದು ಇರುತ್ತದೆ. ಆದರಂತೆ ಚೆಕ್‌ಲಿಸ್ಟ್ ತೆಗೆಸಿದ್ದು, ಸದ್ರಿ ಪ್ರಕರಣದಲ್ಲಿ ಮರುಟ್ಲ ಗ್ರಾಮದ ಸ.ನಂ. 87/ /ವಿಸ್ತೀರ್ಣ 11.28 ಎಕರೆ ಜಮೀನನ್ನು ತಂದೆಯಾದ ದಿ:ಕೆ.ಲಕ್ಷ್ಮಣರಾವ್ ಇವರ ಹೆಸರಿಗೆ ಪಟ್ಟಾಯಿದ್ದು, ಸದ್ರಿ ಜಮೀನನ್ನು ನಮ್ಮ ಸ್ವಾಧೀನುಭದಲ್ಲಿರುವುದರಿಂದ, ಸದ್ರಿ ಜಮೀನನ್ನು ಯಾರ ಹೆಸರಿಗೆ ಪಟ್ಟಾ ವರ್ಗಾವಣೆ ಮಾಡಬಾರದೆಂದು ಪ್ರತಿವಾದಿ-1 ಶ್ರೀ.ಕೆ.ಹನುಮೇಶರಾವ್ ತಂದೆ.ಕೆ.ಲಕ್ಷ್ಮಣರಾವ್, ಕಮಲಾಪುರ, ಹೊಸಪೇಟೆ ತಾಲ್ಲೂಕು ಇವರು ತಕರಾರು ಸಲ್ಲಿಸಿದ್ದು ಇರುತ್ತದೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಹೊರಗಡೆ ಪ್ರತಿವಾದಿ-1 ಶ್ರೀ.ಕೆ.ಹನುಮೇಶರಾವ್ ತಂದೆ.ಕೆ.ಲಕ್ಷ್ಮಣರಾವ್, ಕಮಲಾಪುರ, ಹೊಸಪೇಟೆ ತಾಲ್ಲೂಕು ಇವರು ಮತ್ತು ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಪರಸ್ಪರ ಒಪ್ಪಿಕೊಂಡು ಸದ್ರಿ ಮರುಟ್ಲ ಗ್ರಾಮದ ಸ.ನಂ. 87/ /ವಿಸ್ತೀರ್ಣ 11.28 ಎಕರೆ ಜಮೀನನ್ನು ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ನನ್ನ ಅಭ್ಯಂತರವಿಲ್ಲವೆಂದು ಪ್ರತಿವಾದಿ-1 ಶ್ರೀ.ಕೆ.ಹನುಮೇಶರಾವ್ ತಂದೆ.ಕೆ.ಲಕ್ಷ್ಮಣರಾವ್, ಕಮಲಾಪುರ, ಹೊಸಪೇಟೆ ತಾಲ್ಲೂಕು ಇವರು ದಿನಾಂಕ:14-03-2016 ರಂದು ಪ್ರಮಾಣಪತ್ರ ಬರೆದುಕೊಟ್ಟಿದ್ದು ಇರುತ್ತದೆ.

(P.T.O)

(13?)



ವಿವಾದಸ್ಪದ ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಜಮೀನಿಗೆ ಪ್ರತಿವಾದಿ-2 ಶ್ರೀ.ಪುಲ್ಲಯ್ಯ ತಂದೆ.ರಂಗಪ್ಪ, ಸಾ:ಮರುಟ್ಲ ಗ್ರಾಮ, ಸಂಡೂರು ತಾಲ್ಲೂಕು ಇವರು ತಕರಾರು ಸಲ್ಲಿಸಿದ್ದು, ಅದಕ್ಕೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಇವರ ಅರೋಪ ಸುಳ್ಳಿನಿಂದ ಕೂಡಿರುತ್ತದೆಂದು ತಿಳಿಸಿ ಇವರ ತಕರಾರು ಅರ್ಜಿಯನ್ನು ತಳ್ಳಿಹಾಕಲು ಕೋರಿದ್ದು ಇರುತ್ತದೆ.

ಸದ್ರಿ ವಿವಾದಸ್ಪದ ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಮತ್ತು ಸ.ನಂ. 87/ / ವಿಸ್ತೀರ್ಣ 11.28 ಎಕರೆ ಜಮೀನುಗಳು ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರ ತಾತನಾದ ವಾದಿ-1 ದಿ:ಶ್ರೀ.ಹಂಪಣ್ಣ ತಂದೆ.ಎಂ.ಹನುಮಂತಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಖರೀದಿಸಿದ್ದು, ಇವರಿಗೆ ಇಬ್ಬರು ಮಕ್ಕಳಿದ್ದು ಶ್ರೀ.ಮದ್ಲೆಟಪ್ಪ ಇವರು ದಿನಾಂಕ: 1-1-2009 ರಂದು ಮರಣ ಹೊಂದಿದ್ದು, (2)ಶ್ರೀಮತಿ.ಸುಬ್ಬಮ್ಮ (ಇದ್ದಾಳೆ) ಇವರು ಮತ್ತು ಶ್ರೀ.ಮದ್ಲೆಟಪ್ಪ ಮಕ್ಕಳಾದ (1)ಶ್ರೀ.ಹಂಪಣ್ಣ 40 ವರ್ಷ (2)ವೀರಾ ವಸಂತರಾಯ 38 ವರ್ಷ (3)ಶ್ರೀ.ರುದ್ರೇಶ 36 ವರ್ಷ (4)ಶಿವಕುಮಾರ 30 ವರ್ಷ (5)ಕೃಷ್ಣ 25 ವರ್ಷ ಇವರೆಲ್ಲರೂ ಒಪ್ಪಿಗೊಂಡು, ಸದ್ರಿ ವಿವಾದಾಸ್ಪದ ಆಸ್ತಿಯನ್ನು ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರ ಹೆಸರಿಗೆ ಹಕ್ಕುಬದಲಾಣೆ ಮಾಡಲು ನಮ್ಮದೇನು ಅಭ್ಯಂತರವಿರುವುದಿಲ್ಲವೆಂದು ಲಿಖಿತ ಹೇಳಿಕೆ ಸಲ್ಲಿಸಿದ್ದು ಇರುತ್ತದೆ.

ಪ್ರತಿವಾದಿ-2 ಶ್ರೀ.ಪುಲ್ಲಯ್ಯ ತಂದೆ.ರಂಗಪ್ಪ, ಸಾ:ಮರುಟ್ಲ ಗ್ರಾಮ, ಸಂಡೂರು ತಾಲ್ಲೂಕು ಇವರು ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಜಮೀನಿಗೆ ತಕರರು ಸಲ್ಲಿಸಿ, ಸದ್ರಿ ಸರ್ವೆನಂಬರ್ ಜಮೀನನ್ನು ಯಾರ ಹೆಸರಿಗೆ ಹಕ್ಕುಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಿದ್ದು ಇರುತ್ತದೆ. ಆದರೆ ಯಾವುದೇ ಸೂಕ್ತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ದಿನಾಂಕ:12-03-2015 ರ ವರದಿಯಲ್ಲಿ ಶ್ರೀ.ಕೇಶವಚಾರ ಇವರ ಹೆಸರಿನಲ್ಲಿರುವ ಮರುಟ್ಲ ಗ್ರಾಮದ ಸ.ನಂ. 47/ / ವಿಸ್ತೀರ್ಣ 7.53 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಬಳ್ಳಾರಿ ಇವರ ಡಾಕುಮೆಂಟ್ರ ಪತ್ರಸಂಖ್ಯೆ. 1194/1969-70 ದಿನಾಂಕ: 10-06-1969 ರ ಪ್ರಕಾರ ವಾದಿ-1 ದಿ:ಶ್ರೀ.ಹಂಪಣ್ಣ ತಂದೆ.ಎಂ.ಹನುಮಂತಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಖರೀದಿಸಿದ್ದು, ಇವರು ದಿನಾಂಕ:3-4-2004 ರಂದು ಮರಣಹೊಂದಿದ್ದು, ಇವರ ವಾರಸುದಾರರ ಮಗನಾದ ಮದ್ಲೇಟಪ್ಪ ಇವರು ದಿನಾಂಕ:01-01-2009 ರಂದು ಮರಣ ಹೊಂದಿದ್ದು, ಇವರ ಮಗನಾದ ಹಾಗೂ ವಾದಿ-1 ಯವರಿಂದ ವಾದಿ-2 ಶ್ರೀ.ರುದ್ರೇಶ ತಂದೆ.ಮದ್ಲೇಟಪ್ಪ, ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಈಗ ಸದ್ರಿ ಜಮೀನಿನ ಸ್ವಾಧೀನಾನುಭದಲ್ಲಿರುತ್ತಾರೆ. ಹಾಗೂ ಮರುಟ್ಲ ಗ್ರಾಮದ ಸ.ನಂ. ಲಚ್ಮನ ಮಗ ಹನುಂತರಾವ್ ಮೈ.ನಿ.ಸುಂದ್ರಮ್ಮ ಇವರ ಹೆಸರಿನಲ್ಲಿರುವ ಮರುಟ್ಲ ಗ್ರಾಮದ ಸ.ನಂ. 87/ /ವಿಸ್ತೀರ್ಣ 11.28 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಬಳ್ಳಾರಿ ಇವರ ಡಾಕುಮೆಂಟ್ರ ಪತ್ರಸಂಖ್ಯೆ. 3889/1964 ದಿನಾಂಕ:04-02-1964 ರಲ್ಲಿ ವಾದಿ-1 ದಿ:ಮದ್ಲೇಟಪ್ಪ ಹಂಪಣ್ಣ ತಂದೆ.

(P.T.O)